



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. *ಹಾಮೀಮ್.

حٰمٓ ①

2. ಈ ಗ್ರಂಥದ ಅವತೀರ್ಣವು ಪ್ರಬಲನೂ ಯುಕ್ತಿಪೂರ್ಣನೂ ಆದ ಅಲ್ಲಾಹನ ಕಡೆಯಿಂದಾಗಿರುತ್ತದೆ.

تَنْزِيْلُ الْكِتٰبِ مِنَ اللّٰهِ الْعَزِيْزِ الْحَكِيْمِ ②

3. ನಾವು ಭೂಮಿ-ಆಕಾಶಗಳನ್ನೂ ಅವುಗಳ ನಡುವೆ ಇರುವುದೆಲ್ಲವನ್ನೂ ಪರಮ ಸತ್ಯವಾಗಿ ಹಾಗೂ ಒಂದು ನಿಶ್ಚಿತ ಅವಧಿಯನ್ನು ನಿರ್ಧರಿಸಿ ಸೃಷ್ಟಿಸಿದ್ದೇವೆ. ಆದರೆ ಈ ಸತ್ಯನಿಷೇಧಿಗಳು ಇವರಿಗೆ ಎಚ್ಚರಿಕೆ ನೀಡಲಾಗಿರುವಂತಹ ವಾಸ್ತವಿಕತೆಯ ಕಡೆಯಿಂದ ಮುಖ ತಿರುಗಿಸಿ ಕೊಂಡಿದ್ದಾರೆ.

مَا خَلَقْنَا السَّمٰوٰتِ وَالْاَرْضَ وَمَا
بَيْنَهُمَآ اِلَّا بِالْحَقِّ وَاَجَلٍ مُّسَمًّى ؕ وَ
الَّذِيْنَ كَفَرُوْا عَمَّآ اُنْذِرُوْا مُعْرِضُوْنَ ③

4. ಸಂದೇಶವಾಹಕರೇ, ಇವರೊಡನೆ (ಹೀಗೆ) ಹೇಳಿರಿ: "ನೀವು ಅಲ್ಲಾಹನನ್ನು ಬಿಟ್ಟು, ಪ್ರಾರ್ಥಿಸುತ್ತಿರುವವುಗಳು ಏನಾಗಿರುತ್ತವೆ ಎಂಬುದನ್ನು ನೀವು ಕಣ್ತೆರೆದು ನೋಡಿದಿರಾ? ಅವರು ಈ ಭೂಮಿಯಲ್ಲಿ ಏನನ್ನು ಸೃಷ್ಟಿಸಿದ್ದಾರೆಂಬುದನ್ನು ಅಥವಾ ಆಕಾಶಗಳ ಸೃಷ್ಟಿ ಹಾಗೂ ವ್ಯವಸ್ಥಾಪನೆಯಲ್ಲಿ ಅವರದ್ದೇನಾದರೂ ಪಾಲಿದೆಯೇ ಎಂಬುದನ್ನು ನನಗೆ ತೋರಿಸುವಿರಾ? ನೀವು ಸತ್ಯವಾದಿಗಳಾಗಿದ್ದರೆ ಇದಕ್ಕಿಂತ ಮುಂಚೆ ಬಂದ ಯಾವುದಾದರೂ ಗ್ರಂಥ ಅಥವಾ ಜ್ಞಾನದ ಯಾವುದಾದರೂ ಪಳಿಯುಳಿಕೆಯು (ಈ ನಿಮ್ಮ ನಂಬಿಕೆಗಳಿಗೆ ಆಧಾರವಾಗಿ) ನಿಮ್ಮ ಬಳಿಯಲ್ಲಿದ್ದರೆ ಅದನ್ನೇ ತನ್ನಿರಿ.

قُلْ اَرَءَيْتُمْ مَّا تَدْعُوْنَ مِنْ دُوْنِ
اللّٰهِ اَرُوْنِيْ مَاذَا خَلَقُوْا مِنَ الْاَرْضِ
اَمْ لَهُمْ شِرْكٌ فِي السَّمٰوٰتِ ؕ اِيْتُوْنِيْ
بِكِتٰبٍ مِّنْ قَبْلِ هٰذَآ اَوْ اَثٰرَةٍ مِّنْ
عِلْمٍ اِنْ كُنْتُمْ صٰدِقِيْنَ ④

5. ಅಲ್ಲಾಹನನ್ನು ಬಿಟ್ಟು, ಪುನರುತ್ಥಾನ ದಿನದ ವರೆಗೂ ಅವನಿಗೆ

وَمَنْ اَضَلُّ مِمَّنْ يَّدْعُوْا مِنْ دُوْنِ

*ಇಲ್ಲಿಂದ **26ನೆಯ ಕಾಂಡ ಆರಂಭ.**

ಉತ್ತರ ಕೊಡಲಾಗದಂತಹವರನ್ನು ಪ್ರಾರ್ಥಿಸುವವನಿಗಿಂತಲೂ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು?[1] ಮಾತ್ರವಲ್ಲ, ಅವರಿಗಂತೂ ಪ್ರಾರ್ಥಿಸುವವರು ತಮ್ಮನ್ನು ಪ್ರಾರ್ಥಿಸುತ್ತಿದ್ದಾರೆಂಬ ಅರಿವು ಕೂಡಾ ಇಲ್ಲ.

اللّٰهِ مَنْ لَّا يَسْتَجِيْبُ لَهٗٓ اِلٰى يَوْمِ
الْقِيٰمَةِ وَهُمْ عَنْ دُعَآئِهِمْ غٰفِلُوْنَ ⑤

6. ಸಕಲ ಮಾನವರೂ ಒಟ್ಟುಗೂಡಿಸಲ್ಪಡುವಂದು ಅವರು ತಮ್ಮನ್ನು ಪ್ರಾರ್ಥಿಸುತ್ತಿದ್ದವರ ಶತ್ರುಗಳಾಗಿ ಬಿಡುವರು ಮತ್ತು ಅವರು ತಮ್ಮನ್ನು ಆರಾಧಿಸುತ್ತಿದ್ದರೆಂಬುದನ್ನೇ ನಿರಾಕರಿಸಿ ಬಿಡುವರು.[2]

وَاِذَا حُشِرَ النَّاسُ كَانُوْا لَهُمْ اَعْدَآءً
وَّكَانُوْا بِعِبَادَتِهِمْ كٰفِرِيْنَ ⑥

7. ಇವರಿಗೆ ನಮ್ಮ ಸುಸ್ಪಷ್ಟವಾದ ಸೂಕ್ತಗಳನ್ನು ಓದಿ ಹೇಳುವಾಗ ಹಾಗೂ ಸತ್ಯವು ಇವರ ಮುಂದೆ ಬಂದು ಬಿಡುವಾಗ ಈ ಸತ್ಯ ನಿಷೇಧಿಗಳು ಅದರ ಕುರಿತು, "ಇದು ಸ್ಪಷ್ಟವಾದ ಜಾದೂಗಾರಿಕೆ" ಎಂದು ಹೇಳುತ್ತಾರೆ.

وَاِذَا تُتْلٰى عَلَيْهِمْ اٰيٰتُنَا بَيِّنٰتٍ قَالَ
الَّذِيْنَ كَفَرُوْا لِلْحَقِّ لَمَّا جَآءَهُمْ هٰذَا
سِحْرٌ مُّبِيْنٌ ۗ⑦

8. ಸಂದೇಶವಾಹಕರು ಇದನ್ನು ಸ್ವತಃ ಸೃಷ್ಟಿಸಿದ್ದೆಂದು ಇವರು ಹೇಳುತ್ತಿರುವರೇ? ಇವರೊಡನೆ ಹೇಳಿರಿ- "ಇದನ್ನು ಸ್ವತಃ ನಾನೇ ರಚಿಸಿದ್ದರೆ, ನೀವು ನನ್ನನ್ನು ಅಲ್ಲಾಹನ ಶಿಕ್ಷೆಯಿಂದ ಸ್ವಲ್ಪವೂ ರಕ್ಷಿಸಲಾರಿರಿ. ನೀವು ಕಟ್ಟುತ್ತಿರುವ ಮಾತುಗಳನ್ನು ಅಲ್ಲಾಹನು ಚೆನ್ನಾಗಿ ಬಲ್ಲನು. ನನ್ನ ಮತ್ತು ನಿಮ್ಮ ನಡುವೆ ಸಾಕ್ಷಿ ಹೇಳಲು ಅವನೇ ಸಾಕು. ಅವನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ."[3]

اَمْ يَقُوْلُوْنَ افْتَرٰىهُ ۗ قُلْ اِنِ افْتَرَيْتُهٗ
فَلَا تَمْلِكُوْنَ لِيْ مِنَ اللّٰهِ شَيْـًٔا ۗ هُوَ
اَعْلَمُ بِمَا تُفِيْضُوْنَ فِيْهِ ۗ كَفٰى بِهٖ
شَهِيْدًاۢ بَيْنِيْ وَبَيْنَكُمْ ۗ وَهُوَ
الْغَفُوْرُ الرَّحِيْمُ ⑧

9. ಇವರೊಡನೆ ಹೇಳಿರಿ - "ನಾನೊಬ್ಬ ಅಪೂರ್ವ ಸಂದೇಶವಾಹಕ ನಲ್ಲ.[4] ನಾಳೆ ನನಗೇನಾಗಲಿದೆ ಎಂಬುದಾಗಲಿ, ನಿಮಗೇನಾಗಲಿದೆ

قُلْ مَا كُنْتُ بِدْعًا مِّنَ الرُّسُلِ
وَمَآ اَدْرِيْ مَا يُفْعَلُ بِيْ وَلَا بِكُمْ ۗ

1. ಉತ್ತರಿಸುವುದು ಎಂದರೆ ಒಬ್ಬನ ಬೇಡಿಕೆಯಂತೆ ತೀರ್ಪು ನೀಡುವುದು. ಅರ್ಥಾತ್, ಅವರ ಪ್ರಾರ್ಥನೆ ಮತ್ತು ಬೇಡಿಕೆಗಳಂತೆ ಯಾವುದೇ ತೀರ್ಮಾನ ಕೈಗೊಳ್ಳುವಂತಹ ಅಧಿಕಾರವೇ ಅವರಿಗಿಲ್ಲ.
2. ಅರ್ಥಾತ್- ಅವರು ಸ್ಪಷ್ಟವಾಗಿ ಹೀಗೆನ್ನುವರು, "ನೀವು ಸಹಾಯಕ್ಕಾಗಿ ನಮ್ಮನ್ನು ಕರೆಯಿರಿ. ನಾವು ನಿಮ್ಮ ಬಯಕೆಗಳನ್ನು ಈಡೇರಿಸುವವರಾಗಿದ್ದೇವೆ ಎಂದು ನಾವು ಯಾವತ್ತೂ ಇವರೊಡನೆ ಹೇಳಿರಲಿಲ್ಲ. ಇವರು ನಮ್ಮನ್ನು ಕೂಗಿ ಕರೆಯುತ್ತಿದ್ದರೆಂದೂ ನಮಗೆ ತಿಳಿದಿರಲಿಲ್ಲ. ಇವರು ತಾವಾಗಿಯೇ ನಮ್ಮನ್ನು ಬೇಡಿಕೆಗಳನ್ನು ಈಡೇರಿಸುವವರೆಂದು ಕಲ್ಪಿಸಿಕೊಂಡರು ಮತ್ತು ನಮ್ಮನ್ನು ಕೂಗಿ ಕರೆಯಲಾರಂಭಿಸಿದರು."
3. ಇಲ್ಲಿ ಈ ವಚನ ಎರಡು ಅರ್ಥಗಳನ್ನು ಕೊಡುತ್ತದೆ. ಮೊದಲನೆಯದಾಗಿ ಅಲ್ಲಾಹನ ಕರುಣೆ ಮತ್ತು ಕ್ಷಮೆಯಿಂದಾಗಿಯೇ ದೇವವಾಣಿಯನ್ನು ಸುಳ್ಳೆಂದು ಸಾರಲು ಹಿಂಜರಿಯದಂತಹ ಜನರು ಭೂಮಿಯಲ್ಲಿ ಉಸಿರಾಡುತ್ತಿದ್ದಾರೆ. ನಿಷ್ಕರುಣೆ ಮತ್ತು ಕಠೋರನಾದ ದೇವನು ನಿಸರ್ಗದ ಮಾಲಕನಾಗಿರುತ್ತಿದ್ದರೆ ಇಂತಹ ಭಂಡತನವನ್ನು ಪ್ರದರ್ಶಿಸುವವನಿಗೆ ಒಂದು ಉಸಿರಿನ ನಂತರ ಇನ್ನೊಂದು ಉಸಿರನ್ನೆಳೆಯುವ ಸೌಭಾಗ್ಯವೂ ದೊರೆಯುತ್ತಿರಲಿಲ್ಲ. ಇದರ ಎರಡನೆಯ ಅರ್ಥವೇನೆಂದರೆ, ಅಕ್ರಮಿಗಳೇ! ಈಗಲೂ ಈ ಹಟಮಾರಿತನದಿಂದ ನೀವು ದೂರ ಸರಿಯುವುದಾದರೆ ದೇವನ ಅನುಗ್ರಹದ ದ್ವಾರ ನಿಮ್ಮ ಪಾಲಿಗೆ ತೆರೆದುಕೊಂಡಿದೆ. ನೀವು ಈ ತನಕ ಎಸಗಿರುವ ತಪ್ಪುಗಳೆಲ್ಲವೂ ಕ್ಷಮಿಸಲ್ಪಡಲಿಕ್ಕೂ ಸಾಧ್ಯವಿದೆ.
4. ಅರ್ಥಾತ್- ಯಾವ ರೀತಿ ಹಿಂದಿನ ಪ್ರವಾದಿಗಳೆಲ್ಲರೂ ಮಾನವರೇ ಆಗಿದ್ದರೋ ದೇವನ ಗುಣವಿಶೇಷತೆ ಮತ್ತು ಅಧಿಕಾರಗಳಲ್ಲಿ ಹೇಗೆ ಅವರಿಗೆ ಯಾವುದೇ ರೀತಿಯ ಪಾಲಿರಲಿಲ್ಲವೋ ನಾನೂ ಅಂತಹ ಒಬ್ಬ ಪ್ರವಾದಿ.

ಎಂಬುದಾಗಲಿ ನನಗರಿಯದು. ನಾನಂತು ನನ್ನ ಬಳಿಗೆ ಕಳುಹಿಸಲಾಗುತ್ತಿರುವ ದಿವ್ಯವಾಣಿಯನ್ನು ಅನುಸರಿಸುತ್ತೇನೆ. ನಾನೊಬ್ಬ ಸುಸ್ಪಷ್ಟ ಎಚ್ಚರಿಕೆ ನೀಡುವವನೇ ಹೊರತು ಇನ್ನೇನೂ ಅಲ್ಲ."

إِنْ أَتَّبِعُ إِلَّا مَا يُوحَىٰٓ إِلَيَّ وَمَآ أَنَا
إِلَّا نَذِيرٌ مُّبِينٌ ٩

10. ಸಂದೇಶವಾಹಕರೇ ಇವರೊಡನೆ ಹೇಳಿರಿ: "ಒಂದು ವೇಳೆ ಈ ಸಂದೇಶವು ಅಲ್ಲಾಹನ ಕಡೆಯಿಂದಲೇ ಬಂದಿದ್ದು ನೀವಿದನ್ನು ತಿರಸ್ಕರಿಸಿ ಬಿಟ್ಟರೆ (ನಿಮ್ಮ ಗತಿ ಏನಾದೀತು) ಎಂದು ನೀವೆಂದಾದರೂ ಯೋಚಿಸಿರುವಿರಾ? ಇದರಂತಹ ಒಂದು ವಾಣಿಯ ಬಗ್ಗೆ ಬನೀಇಸ್ರಾಈಲರ ಒಬ್ಬ ಸಾಕ್ಷಿದಾರನು ಸಾಕ್ಷ್ಯವನ್ನೂ ಹೇಳಿದ್ದಾನೆ. ಅವನು ವಿಶ್ವಾಸವಿಟ್ಟನು ಮತ್ತು ನೀವು ನಿಮ್ಮ ಅಹಂಕಾರದಲ್ಲೇ ಬಿದ್ದುಬಿಟ್ಟಿರಿ.[5] ಇಂತಹ ಅಕ್ರಮಿಗಳಿಗೆ ಅಲ್ಲಾಹನು ಸನ್ಮಾರ್ಗ ನೀಡುವುದಿಲ್ಲ.

قُلْ أَرَءَيْتُمْ إِن كَانَ مِنْ عِندِ ٱللَّهِ
وَكَفَرْتُم بِهِۦ وَشَهِدَ شَاهِدٌ مِّنۢ
بَنِىٓ إِسْرَٰٓءِيلَ عَلَىٰ مِثْلِهِۦ فَـَٔامَنَ
وَٱسْتَكْبَرْتُمْ ۖ إِنَّ ٱللَّهَ لَا يَهْدِى
ٱلْقَوْمَ ٱلظَّٰلِمِينَ ١٠ ع

11. ಸತ್ಯನಿಷೇಧಿಗಳು ಸತ್ಯವಿಶ್ವಾಸಿಗಳ ಕುರಿತು, "ಈ ಗ್ರಂಥವನ್ನು ನಂಬುವುದು ಒಂದು ಸತ್ಕಾರ್ಯವಾಗಿರುತ್ತಿದ್ದರೆ ಇವರು ಈ ವಿಷಯದಲ್ಲಿ ನಮಗಿಂತ ಮುಂದಾಗಲು ಸಾಧ್ಯವಾಗುತ್ತಿರಲಿಲ್ಲ" ಎನ್ನುತ್ತಾರೆ. ಇವರು ಅದರಿಂದ ಮಾರ್ಗದರ್ಶನ ಪಡೆಯಲಿಲ್ಲವಾದ್ದರಿಂದ ಇವರೀಗ, "ಇದಂತು ಹಳೆಯ ಸುಳ್ಳಾಗಿದೆ" ಎಂದು ಖಂಡಿತ ಹೇಳುವರು.[6]

وَقَالَ ٱلَّذِينَ كَفَرُوا۟ لِلَّذِينَ ءَامَنُوا۟
لَوْ كَانَ خَيْرًا مَّا سَبَقُونَآ إِلَيْهِ ۚ
وَإِذْ لَمْ يَهْتَدُوا۟ بِهِۦ فَسَيَقُولُونَ هَٰذَآ
إِفْكٌ قَدِيمٌ ١١

12. ವಸ್ತುತಃ ಇದಕ್ಕೆ ಮುಂಚೆ ಮೂಸಾರ ಗ್ರಂಥವು ಮಾರ್ಗದರ್ಶಿ ಮತ್ತು ಕೃಪೆಯಾಗಿ ಬಂದಿತ್ತು ಮತ್ತು ಅದನ್ನು ಸಮರ್ಥಿಸುವ ಈ ಗ್ರಂಥವು ಅರಬೀ ಭಾಷೆಯಲ್ಲಿ ಬಂದಿದೆ- ಅಕ್ರಮಿಗಳಿಗೆ ಎಚ್ಚರಿಕೆ ಕೊಡಲಿಕ್ಕಾಗಿ ಹಾಗೂ ಸಜ್ಜನರಿಗೆ ಸುವಾರ್ತೆ ನೀಡಲಿಕ್ಕಾಗಿ.

وَمِن قَبْلِهِۦ كِتَٰبُ مُوسَىٰٓ إِمَامًا وَ
رَحْمَةً ۚ وَهَٰذَا كِتَٰبٌ مُّصَدِّقٌ لِّسَانًا
عَرَبِيًّا لِّيُنذِرَ ٱلَّذِينَ ظَلَمُوا۟ ۖ وَ
بُشْرَىٰ لِلْمُحْسِنِينَ ١٢

13. ನಿಸ್ಸಂದೇಹವಾಗಿಯೂ ಅಲ್ಲಾಹನೇ ನಮ್ಮ ಪ್ರಭು ಎಂದು ಹೇಳಿ ಅದರಲ್ಲೇ ಸ್ಥಿರಗೊಂಡವರಿಗೆ ಯಾವ ಭಯವೂ ಇಲ್ಲ. ಅವರು ದುಃಖಿತಪ್ಪರೂ ಆಗಲಿಕ್ಕಿಲ್ಲ.

إِنَّ ٱلَّذِينَ قَالُوا۟ رَبُّنَا ٱللَّهُ ثُمَّ
ٱسْتَقَٰمُوا۟ فَلَا خَوْفٌ عَلَيْهِمْ
وَلَا هُمْ يَحْزَنُونَ ١٣

5. ಇಲ್ಲಿ ಸಾಕ್ಷಿದಾರ ಎಂದರೆ ಬನೀಇಸ್ರಾಈಲ್‌ನ ಯಾವುದೇ ವಿಶೇಷ ವ್ಯಕ್ತಿಯಲ್ಲ. ಬದಲಾಗಿ ಬನೀ ಇಸ್ರಾಈಲ್‌ನ ಓರ್ವ ಸಾಮಾನ್ಯ ವ್ಯಕ್ತಿ. ಅಲ್ಲಾಹನ ಈ ಮಾತಿನ ಇಂಗಿತವೇನೆಂದರೆ ಪವಿತ್ರ ಕುರ್‌ಆನ್ ನಿಮ್ಮ ಮುಂದಿಡುವ ಬೋಧನೆ ಅನುಪಮವಾದುದೇನಲ್ಲ. ಅದು ಜಗತ್ತಿನ ಮುಂದೆ ಮೊಟ್ಟ ಮೊದಲ ಬಾರಿ ಸಮರ್ಪಿಸಲ್ಪಟ್ಟಿಲ್ಲ. ಆದ್ದರಿಂದ ಮನುಷ್ಯರ ಮುಂದೆ ಹಿಂದೆಂದೂ ಬಂದಿರದಂತಹ ಈ ಅಪರಿಚಿತ ಮಾತುಗಳನ್ನು ಸಮ್ಮತಿಸುವುದು ಹೇಗೆ ಎಂಬ ನೆಪವನ್ನು ನೀವು ಮುಂದಿಡುವಂತಿಲ್ಲ. ತೌರಾತ್ ಮತ್ತು ಇತರ ದಿವ್ಯ ಗ್ರಂಥಗಳ ರೂಪದಲ್ಲಿ ಇದಕ್ಕೆ ಮೊದಲೂ ಬನೀಇಸ್ರಾಈಲರಿಗೆ ಇಂತಹುದೇ ಬೋಧನೆಗಳನ್ನು ನೀಡಲಾಗಿತ್ತು. ಮಾತ್ರವಲ್ಲ ಬನೀಇಸ್ರಾಈಲರ ಒಬ್ಬ ಸಾಮಾನ್ಯ ವ್ಯಕ್ತಿಯೂ ಅದರ ಮೇಲೆ ವಿಶ್ವಾಸವಿಟ್ಟಿದ್ದನು.

6. ಕುರ್‌ಆನಿನ ಮೇಲೆ ಕೆಲವು ಅವಿವೇಕಿಗಳಷ್ಟೇ ವಿಶ್ವಾಸವಿರಿಸಿದ್ದಾರೆ. ಅನ್ಯಥಾ ಅದೊಂದು ಒಳ್ಳೆಯ ಕೆಲಸವಾಗಿದ್ದರೆ ನಮ್ಮಂತಹ ಬುದ್ಧಿಜೀವಿಗಳು ಅದನ್ನು ನಂಬುವುದರಲ್ಲಿ ಹಿಂದೆ ಬೀಳಲು ಸಾಧ್ಯವಿರಲಿಲ್ಲ ಎಂಬುದು ಅವರ ಇಂಗಿತವಾಗಿತ್ತು.

14. ಇಂತಹವರು ಸ್ವರ್ಗಕ್ಕೆ ಹೋಗುವವರಾಗಿದ್ದಾರೆ. ಅವರು ಇಹ ಲೋಕದಲ್ಲಿ ಮಾಡುತ್ತಿದ್ದ ಸತ್ಕರ್ಮಗಳ ಪ್ರತಿಫಲವಾಗಿ ಅಲ್ಲಿ ಸದಾಕಾಲ ಇರುವರು.

أُولَٰٓئِكَ أَصْحَٰبُ الْجَنَّةِ خَٰلِدِينَ فِيهَا ۖ جَزَآءًۢ بِمَا كَانُوا يَعْمَلُونَ ﴿١٤﴾

15. ತನ್ನ ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂದು ನಾವು ಮಾನವನಿಗೆ ಆದೇಶಿಸಿದೆವು. ಅವನ ತಾಯಿಯು ಬಹಳ ಕಷ್ಟಪಟ್ಟು ಅವನನ್ನು ಗರ್ಭದಲ್ಲಿರಿಸಿದಳು ಮತ್ತು ಕಷ್ಟಪಟ್ಟೇ ಅವನನ್ನು ಹೆತ್ತಳು. ಅವನ ಗರ್ಭಾವಧಿಯಲ್ಲಿ ಮತ್ತು ಮೊಲೆ ಹಾಲು ಬಿಡಿಸುವುದರಲ್ಲಿ ಮೂವತ್ತು ತಿಂಗಳುಗಳು ತಗಲಿದವು. ಅವನು ಸಂಪೂರ್ಣ ಪ್ರಾಬಲ್ಯಕ್ಕೆ ಬಂದು ನಲ್ವತ್ತು ವರ್ಷದವನಾದಾಗ, "ನನ್ನ ಪ್ರಭೂ, ನೀನು ನನಗೂ ನನ್ನ ಮಾತಾಪಿತರಿಗೂ ಕರುಣಿಸಿರುವ ಅನುಗ್ರಹಗಳ ಬಗ್ಗೆ ಕೃತಜ್ಞತೆ ಸಲ್ಲಿಸುವ ಹಾಗೂ ನೀನು ಸಂತೃಪ್ತನಾಗುವಂತಹ ಸತ್ಕರ್ಮಗಳನ್ನು ಮಾಡುವ ಸೌಭಾಗ್ಯವನ್ನು ನನಗೆ ನೀಡು ಮತ್ತು ನನ್ನ ಮಕ್ಕಳನ್ನೂ ಸಜ್ಜನರಾಗಿ ಮಾಡಿ ನನಗೆ ಸುಖ ನೀಡು. ನಾನು ನಿನ್ನ ಸನ್ನಿಧಿಯಲ್ಲಿ ಪಶ್ಚಾತ್ತಾಪ ಪಡುತ್ತೇನೆ ಮತ್ತು ಖಂಡಿತವಾಗಿಯೂ ನಾನು ಶರಣಾಗತ(ಮುಸ್ಲಿಮ್) ದಾಸರಲ್ಲಾಗಿರುತ್ತೇನೆ" ಎಂದನು.

وَوَصَّيْنَا الْإِنسَٰنَ بِوَٰلِدَيْهِ إِحْسَٰنًا ۖ حَمَلَتْهُ أُمُّهُۥ كُرْهًا وَوَضَعَتْهُ كُرْهًا ۖ وَحَمْلُهُۥ وَفِصَٰلُهُۥ ثَلَٰثُونَ شَهْرًا ۚ حَتَّىٰٓ إِذَا بَلَغَ أَشُدَّهُۥ وَبَلَغَ أَرْبَعِينَ سَنَةً قَالَ رَبِّ أَوْزِعْنِىٓ أَنْ أَشْكُرَ نِعْمَتَكَ الَّتِىٓ أَنْعَمْتَ عَلَىَّ وَعَلَىٰ وَٰلِدَىَّ وَأَنْ أَعْمَلَ صَٰلِحًا تَرْضَىٰهُ وَأَصْلِحْ لِى فِى ذُرِّيَّتِىٓ ۖ إِنِّى تُبْتُ إِلَيْكَ وَإِنِّى مِنَ الْمُسْلِمِينَ ﴿١٥﴾

16. ನಾವು ಇಂತಹವರ ಅತ್ಯುತ್ತಮ ಕರ್ಮಗಳನ್ನು ಸ್ವೀಕರಿಸುತ್ತೇವೆ ಮತ್ತು ಅವರ ಪಾಪಗಳನ್ನು ಮನ್ನಿಸುತ್ತೇವೆ. ಅವರೊಡನೆ ಮಾಡಲಾಗುತ್ತಿರುವ ಸತ್ಯವಾಗ್ದಾನಗಳ ಪ್ರಕಾರ ಅವರು ಸ್ವರ್ಗದವರೊಂದಿಗೆ ಸೇರಿಕೊಳ್ಳುವರು.

أُولَٰٓئِكَ الَّذِينَ نَتَقَبَّلُ عَنْهُمْ أَحْسَنَ مَا عَمِلُوا وَنَتَجَاوَزُ عَن سَيِّـَٔاتِهِمْ فِىٓ أَصْحَٰبِ الْجَنَّةِ ۖ وَعْدَ الصِّدْقِ الَّذِى كَانُوا يُوعَدُونَ ﴿١٦﴾

17. ಇನ್ನು ತನ್ನ ಮಾತಾಪಿತರೊಡನೆ, "ಛೀ, ನಿಮ್ಮದೆಂತಹ ಕಿರುಕುಳ! ನಾನು ಮರಣಾನಂತರ ಗೋರಿಯಿಂದ ಹೊರ ತರಲ್ಪಡುವೆನೆಂದು ನೀವು ನನ್ನನ್ನು ಹೆದರಿಸುತ್ತಿರುವಿರಾ? ವಸ್ತುತಃ ನನಗಿಂತ ಮುಂಚೆ ಅನೇಕ ವಂಶಗಳು ಗತಿಸಿವೆ. (ಅವರಲ್ಲಾರೂ ಎದ್ದು ಬಂದದ್ದಿಲ್ಲ)" ಎಂದು ಹೇಳಿದನು. ಅವನ ಮಾತಾಪಿತರು ಅಲ್ಲಾಹನಿಗೆ ಮೊರೆಯಿಟ್ಟು, "ಓ ಭಾಗ್ಯಹೀನನೇ! ಒಪ್ಪಿಕೋ. ಅಲ್ಲಾಹನ ವಾಗ್ದಾನವು ಸತ್ಯವಾದುದು" ಎನ್ನುತ್ತಾರೆ. ಆದರೆ ಅವನು, "ಇವೆಲ್ಲ ಪೂರ್ವಕಾಲದ ಕಟ್ಟುಕತೆಗಳಾಗಿವೆ" ಎನ್ನುತ್ತಾನೆ.

وَالَّذِى قَالَ لِوَٰلِدَيْهِ أُفٍّ لَّكُمَآ أَتَعِدَانِنِىٓ أَنْ أُخْرَجَ وَقَدْ خَلَتِ الْقُرُونُ مِن قَبْلِى وَهُمَا يَسْتَغِيثَانِ اللَّهَ وَيْلَكَ ءَامِنْ إِنَّ وَعْدَ اللَّهِ حَقٌّ فَيَقُولُ مَا هَٰذَآ إِلَّآ أَسَٰطِيرُ الْأَوَّلِينَ ﴿١٧﴾

18. ಯಾತನೆಯ ತೀರ್ಮಾನವು ಅನ್ವಯವಾಗಿರುವುದು ಇದೇ ಜನರ ಮೇಲೆ. ಇವರಿಗಿಂತ ಮೊದಲು ಗತಿಸಿರುವ (ಇದೇ ತರದ) ಯಕ್ಷ ಮತ್ತು ಮಾನವರ ಹಿಂಡುಗಳ ಸಾಲಿಗೆ ಇವರೂ

أُولَٰٓئِكَ الَّذِينَ حَقَّ عَلَيْهِمُ الْقَوْلُ فِىٓ أُمَمٍ قَدْ خَلَتْ مِن قَبْلِهِم مِّنَ الْجِنِّ

ಸೇರಿಕೊಳ್ಳುವರು. ನಿಸ್ಸಂದೇಹವಾಗಿಯೂ ಇವರು ನಷ್ಟಕ್ಕೊಳ ಗಾದವರಾಗಿದ್ದಾರೆ.

وَالْإِنْسِ ۖ إِنَّهُمْ كَانُوا خَاسِرِينَ ﴿١٨﴾

19. ಎರಡು ತಂಡಗಳ ಪೈಕಿ ಪ್ರತಿಯೊಂದು ತಂಡದವರಿಗೂ ಅವರವರ ಕರ್ಮಕ್ಕನುಸಾರವಾದ ಸ್ಥಾನವಿದೆ. ಅಲ್ಲಾಹನು ಅವರಿಗೆ ಅವರ ಕರ್ಮಗಳ ಪರಿಪೂರ್ಣ ಪ್ರತಿಫಲ ನೀಡುವಂತಾಗಲಿಕ್ಕಾಗಿ ಅವರ ಮೇಲೆ ಖಂಡಿತ ಅನ್ಯಾಯವಾಗದು.

وَلِكُلٍّ دَرَجَاتٌ مِمَّا عَمِلُوا ۖ
وَلِيُوَفِّيَهُمْ أَعْمَالَهُمْ وَهُمْ لَا يُظْلَمُونَ ﴿١٩﴾

20. ಈ ಸತ್ಯನಿಷೇಧಿಗಳು ಅಗ್ನಿಯ ಮುಂದೆ ಬಂದು ನಿಲ್ಲಿಸಲ್ಪಟ್ಟಾಗ ಅವರೊಡನೆ, "ನೀವು ನಿಮ್ಮ ಪಾಲಿನ ಅನುಗ್ರಹಗಳನ್ನು ನಿಮ್ಮ ಲೌಕಿಕ ಜೀವನದಲ್ಲೇ ಮುಗಿಸಿಬಿಟ್ಟಿರಿ ಮತ್ತು ಅವುಗಳ ಸವಿಯನ್ನು ಅನುಭವಿಸಿಕೊಂಡಿರಿ. ನೀವು ಭೂಮಿಯಲ್ಲಿ ಯಾವುದೇ ಹಕ್ಕಿಲ್ಲದೆ ತೋರುತ್ತಿದ್ದ ಅಹಂಕಾರದ ಹಾಗೂ ನೀವು ಮಾಡಿದ ಆಜ್ಞೋಲ್ಲಂಘನೆಯ ಫಲವಾಗಿ ಇಂದು ನಿಮಗೆ ಅಪಮಾನಕಾರಕ ಯಾತನೆ ಕೊಡಲಾಗುವುದು" ಎಂದು ಹೇಳಲಾಗುವುದು.

وَيَوْمَ يُعْرَضُ الَّذِينَ كَفَرُوا عَلَى النَّارِ
أَذْهَبْتُمْ طَيِّبَاتِكُمْ فِي حَيَاتِكُمُ الدُّنْيَا
وَاسْتَمْتَعْتُمْ بِهَا ۖ فَالْيَوْمَ تُجْزَوْنَ
عَذَابَ الْهُونِ بِمَا كُنْتُمْ تَسْتَكْبِرُونَ
فِي الْأَرْضِ بِغَيْرِ الْحَقِّ وَبِمَا كُنْتُمْ
تَفْسُقُونَ ﴿٢٠﴾

21. ಇವರಿಗೆ 'ಆದ್'ರ ಸಹೋದರನ (ಹೂದ್‌ರ) ವೃತ್ತಾಂತವನ್ನು ತಿಳಿಸಿರಿ. ಅವರು 'ಅಹ್‌ಕಾಫ್'ನಲ್ಲಿ ತಮ್ಮ ಜನಾಂಗಕ್ಕೆ, "ಅಲ್ಲಾಹನ ಹೊರತು ಇನ್ನಾರ ದಾಸ್ಯ-ಆರಾಧನೆಯನ್ನು ಮಾಡಬೇಡಿರಿ, ನನಗೆ ನಿಮ್ಮ ವಿಷಯದಲ್ಲಿ ಒಂದು ಭಯಾನಕ ದಿನದ ಯಾತನೆಯ ಭಯವಿದೆ" ಎಂಬ ಎಚ್ಚರಿಕೆ ಕೊಟ್ಟಾಗ- ಇಂತಹ ಎಚ್ಚರಿಕೆ ನೀಡುವವರು ಅವರಿಗಿಂತ ಮುಂಚೆಯೂ ಬಂದಿದ್ದರು ಮತ್ತು ಅವರ ನಂತರವೂ ಬರುತ್ತಿದ್ದರು.-

وَاذْكُرْ أَخَا عَادٍ ۖ إِذْ أَنْذَرَ قَوْمَهُ
بِالْأَحْقَافِ وَقَدْ خَلَتِ النُّذُرُ مِنْ
بَيْنِ يَدَيْهِ وَمِنْ خَلْفِهِ أَلَّا تَعْبُدُوا
إِلَّا اللَّهَ ۖ إِنِّي أَخَافُ عَلَيْكُمْ عَذَابَ
يَوْمٍ عَظِيمٍ ﴿٢١﴾

22. 'ಅವರು ಹೀಗೆಂದರು, "ನೀನು ನಮ್ಮನ್ನು ಮೋಸಗೊಳಿಸಿ ನಮ್ಮ ಆರಾಧ್ಯರಿಂದ ಬೇರ್ಪಡಿಸಿ ಬಿಡಲಿಕ್ಕಾಗಿ ಬಂದಿರುವೆಯಾ? ನೀನು ನಿಜಕ್ಕೂ ಸತ್ಯವಾದಿಯಾಗಿದ್ದರೆ ನಮ್ಮನ್ನು ಬೆದರಿಸುತ್ತಿರುವಂತಹ ನಿನ್ನ ಆ ಯಾತನೆಯನ್ನು ತಂದು ಬಿಡು."

قَالُوا أَجِئْتَنَا لِتَأْفِكَنَا عَنْ آلِهَتِنَا ۖ
فَأْتِنَا بِمَا تَعِدُنَا إِنْ كُنْتَ
مِنَ الصَّادِقِينَ ﴿٢٢﴾

23. ಆಗ ಅವರು; "ಅದರ ಜ್ಞಾನವಂತು ಅಲ್ಲಾಹನಿಗಿದೆ.[7] ನಾನು ನನಗೆ ಕೊಟ್ಟು ಕಳುಹಿಸಲಾಗಿರುವಂತಹ ಸಂದೇಶವನ್ನು ಮಾತ್ರ ನಿಮಗೆ ತಲುಪಿಸುತ್ತಿದ್ದೇನೆ. ಆದರೆ, ನೀವು ಮೌಢ್ಯತೆ ಪ್ರಕಟಿಸುತ್ತಿರುವುದನ್ನು ನಾನು ಕಾಣುತ್ತಿದ್ದೇನೆ" ಎಂದರು.

قَالَ إِنَّمَا الْعِلْمُ عِنْدَ اللَّهِ وَأُبَلِّغُكُمْ
مَا أُرْسِلْتُ بِهِ وَلَٰكِنِّي أَرَاكُمْ
قَوْمًا تَجْهَلُونَ ﴿٢٣﴾

7. ಅರ್ಥಾತ್- ಯಾತನೆಯನ್ನು ಯಾವಾಗ ಕಳುಹಿಸಲಾಗುವುದು ಮತ್ತು ಎಲ್ಲಿಯ ತನಕ ನಿಮಗೆ ಕಾಲಾವಕಾಶ ನೀಡಲಾಗುವುದು ಎಂಬುದರ ಜ್ಞಾನ.

24. ತರುವಾಯ ಅವರು ಆ ಯಾತನೆಯು ತಮ್ಮ ಕಣಿವೆಗಳತ್ತ ಬರುತ್ತಿದ್ದುದನ್ನು ಕಂಡು, "ಇದು ನಮ್ಮ ಮೇಲೆ ಮಳೆ ಸುರಿಸಲಿಕ್ಕಾಗಿ ಬರುತ್ತಿರುವ ಮೋಡ" ಎಂದರು. "ಅಲ್ಲ![8] ವಾಸ್ತವದಲ್ಲಿ ಇದು ನೀವು ಆತುರ ಪಡುತ್ತಿರುವ ವಸ್ತುವೇ ಆಗಿದೆ. ಇದು ಬಿರುಗಾಳಿಯಾಗಿದ್ದು ಇದರಲ್ಲಿ ವೇದನಾಜನಕ ಯಾತನೆ ಇದೆ.

فَلَمَّا رَأَوْهُ عَارِضًا مُّسْتَقْبِلَ أَوْدِيَتِهِمْ
قَالُوا هَٰذَا عَارِضٌ مُّمْطِرُنَا ۚ بَلْ هُوَ
مَا اسْتَعْجَلْتُم بِهِ ۖ رِيحٌ فِيهَا
عَذَابٌ أَلِيمٌ ﴿٢٤﴾

25. ಇದು ತನ್ನ ಪ್ರಭುವಿನ ಅಪ್ಪಣೆಯಂತೆ ಸಕಲ ವಸ್ತುಗಳನ್ನೂ ನಾಶಗೊಳಿಸಿ ಬಿಡುವುದು." ಕೊನೆಗೆ ಅವರ ಪಾಡೇನಾಯಿತೆಂದರೆ, ಅವರ ವಾಸಸ್ಥಾನಗಳ ಹೊರತು ಅಲ್ಲಿ ಬೇರೇನೂ ಕಂಡು ಬರುತ್ತಿರಲಿಲ್ಲ. ಈ ರೀತಿಯಲ್ಲಿ ನಾವು ಅಪರಾಧಿಗಳಿಗೆ ಪ್ರತಿಫಲ ಕೊಡುತ್ತೇವೆ.

تُدَمِّرُ كُلَّ شَيْءٍ بِأَمْرِ رَبِّهَا فَأَصْبَحُوا
لَا يُرَىٰ إِلَّا مَسَاكِنُهُمْ ۚ كَذَٰلِكَ
نَجْزِي الْقَوْمَ الْمُجْرِمِينَ ﴿٢٥﴾

26. ನಾವು ನಿಮಗೆ ಕೊಟ್ಟಿರದಂತಹವುಗಳನ್ನೆಲ್ಲ ಅವರಿಗೆ ಕೊಟ್ಟಿದ್ದೆವು. ನಾವು ಅವರಿಗೆ ಕಿವಿ, ಕಣ್ಣು ಮತ್ತು ಮನಸ್ಸು ಇವೆಲ್ಲವನ್ನೂ ಕೊಟ್ಟಿದ್ದೆವು. ಆದರೆ ಅವರ ಕಿವಿಗಳಾಗಲಿ, ಕಣ್ಣುಗಳಾಗಲಿ, ಮನಸ್ಸುಗಳಾಗಲಿ ಅವರ ಯಾವ ಕೆಲಸಕ್ಕೂ ಬರಲಿಲ್ಲ. ಏಕೆಂದರೆ ಅವರು ಅಲ್ಲಾಹನ ಸೂಕ್ತಗಳನ್ನು ನಿರಾಕರಿಸುತ್ತಿದ್ದರು. ಅವರು ಯಾವುದನ್ನು ಅಪಹಾಸ್ಯ ಮಾಡುತ್ತಿದ್ದರೋ ಅದರ ಸುಳಿಯಲ್ಲೇ ಸಿಲುಕಿ ಬಿಟ್ಟರು.

وَلَقَدْ مَكَّنَّاهُمْ فِيمَا إِن مَّكَّنَّاكُمْ فِيهِ
وَجَعَلْنَا لَهُمْ سَمْعًا وَأَبْصَارًا وَأَفْئِدَةً
فَمَا أَغْنَىٰ عَنْهُمْ سَمْعُهُمْ وَلَا أَبْصَارُهُمْ
وَلَا أَفْئِدَتُهُم مِّن شَيْءٍ إِذْ كَانُوا
يَجْحَدُونَ بِآيَاتِ اللَّهِ وَحَاقَ بِهِم
مَّا كَانُوا بِهِ يَسْتَهْزِئُونَ ﴿٢٦﴾

27. ನಾವು ನಿಮ್ಮ ಪರಿಸರದ ಪ್ರದೇಶಗಳಲ್ಲಿ ಅನೇಕ ನಾಡುಗಳನ್ನು ನಾಶಗೊಳಿಸಿ ಬಿಟ್ಟಿದ್ದೇವೆ. ಅವರು ಮರಳಲೂಬಹುದೆಂದು ನಿರೀಕ್ಷಿಸಿ, ನಾವು ಪದೇಪದೇ ತರತರದ ನಿದರ್ಶನಗಳನ್ನು ಕಳುಹಿಸಿ ಅವರಿಗೆ ತಿಳಿ ಹೇಳಿದೆವು.

وَلَقَدْ أَهْلَكْنَا مَا حَوْلَكُم مِّنَ الْقُرَىٰ
وَصَرَّفْنَا الْآيَاتِ لَعَلَّهُمْ يَرْجِعُونَ ﴿٢٧﴾

28. ಅವರು ಅಲ್ಲಾಹನನ್ನು ಬಿಟ್ಟು, ದೇವ ಸಾಮೀಪ್ಯದ ಮಾಧ್ಯಮಗಳೆಂದು ಭಾವಿಸಿ ಯಾರನ್ನು ಆರಾಧ್ಯರಾಗಿ ಮಾಡಿ ಕೊಂಡಿದ್ದರೋ, ಅವರೇಕೆ ಇವರಿಗೆ ನೆರವಾಗಲಿಲ್ಲ?[9] ವಾಸ್ತವದಲ್ಲಿ

فَلَوْلَا نَصَرَهُمُ الَّذِينَ اتَّخَذُوا مِن
دُونِ اللَّهِ قُرْبَانًا آلِهَةً ۖ بَلْ ضَلُّوا
عَنْهُمْ ۚ وَذَٰلِكَ إِفْكُهُمْ وَمَا

8. ಅವರಿಗೆ ಈ ಉತ್ತರವನ್ನು ಯಾರು ನೀಡಿದ್ದರು ಎಂಬುದರ ವಿವರಣೆ ಇಲ್ಲ. ಮಾತಿನ ಧಾಟಿಯಿಂದ ಆಗಿನ ಪರಿಸ್ಥಿತಿಯೇ ಕಾರ್ಯತಃ ಅವರಿಗೆ ಈ ಉತ್ತರವನ್ನು ನೀಡಿತ್ತೆಂದು ವ್ಯಕ್ತವಾಗುತ್ತದೆ. ತಮ್ಮ ಕಣಿವೆಗಳನ್ನು ಸಂಪದ್ಯುಕ್ತಗೊಳಿಸಲಿಕ್ಕಾಗಿ ಈ ಮೋಡಗಳು ಕವಿದಿವೆ ಎಂದವರು ಭಾವಿಸಿದ್ದರು. ನಿಜವಾಗಿ ಅದು ಅವರನ್ನು ಸರ್ವನಾಶಗೊಳಿಸಲು ಮುಂದೊತ್ತಿ ಬರುತ್ತಿದ್ದ ಬಿರುಗಾಳಿಯಾಗಿತ್ತು.

9. ಅರ್ಥಾತ್ ಇವರು ಅಲ್ಲಾಹನ ಆಪ್ತ ದಾಸರು, ಆದ್ದರಿಂದ 'ಇವರ ಮೂಲಕ ನಮಗೆ ದೇವನೆಡೆಗೆ ತಲಪಲು ಸಾಧ್ಯವಿದೆ' ಎಂಬ ಭರವಸೆಯೊಂದಿಗೆ ವ್ಯಕ್ತಿಗಳ ಜತೆ ಅವರು ಶ್ರದ್ಧೆಯನ್ನು ಬೆಳೆಸಲಾರಂಭಿಸಿದರು. ಆದ್ದರಿಂದ ಅವರನ್ನೇ ಸಹಾಯಕ್ಕಾಗಿ ಕರೆಯತೊಡಗಿದರು. ಪ್ರಾರ್ಥನೆಗಳನ್ನೂ ಅವರೊಡನೆಯೇ ಮಾಡತೊಡಗಿದರು. ಅವರನ್ನೇ ಅಧಿಪತಿಯೆಂದು ಭಾವಿಸಿದರು. ನಮ್ಮ ಮೊರೆಯನ್ನು ಕೇಳಿ ಕಷ್ಟಗಳನ್ನು ನೀಗಿಸುವವರು ಅವರೇ ಆಗಿದ್ದಾರೆಂದುಕೊಂಡರು. ಅವರನ್ನು ಈ ಪಥಭ್ರಷ್ಟತೆಯಿಂದ ಮುಕ್ತಗೊಳಿಸಲಿಕ್ಕಾಗಿಯೇ

ಅವರಂತು ಇವರಿಂದ ಕಳೆದು ಹೋದರು. ಇದು ಅವರ ಅಸತ್ಯ ಹಾಗೂ ಅವರು ಕಟ್ಟಿಕೊಂಡಿದ್ದ ಕೃತಕ ವಿಶ್ವಾಸಗಳ ಪರಿಣಾಮ ವಾಗಿತ್ತು.

كَانُوْا يَفْتَرُوْنَ ﴿٢٨﴾

29. ಕುರ್‌ಆನನ್ನು ಆಲಿಸಲಿಕ್ಕಾಗಿ ಯಕ್ಷಗಳ ಒಂದು ತಂಡವನ್ನು ನಾವು ನಿಮ್ಮ ಕಡೆಗೆ ತಂದಿದ್ದ (ಘಟನೆಯೂ ಸ್ಮರಣಾರ್ಹ ವಾಗಿದೆ.)[10] ಅವರು (ನೀವು ಕುರ್‌ಆನ್ ಪಠಿಸುತ್ತಿದ್ದ) ಆ ಸ್ಥಳವನ್ನು ತಲಪಿದಾಗ 'ಮೌನವಾಗಿರಿ' ಎಂದು ಪರಸ್ಪರ ಹೇಳಿದರು. ಓದಿ ಮುಗಿದಾಗ ಅವರು ಎಚ್ಚರಿಕೆ ನೀಡುವವರಾಗಿ ತಮ್ಮ ಜನಾಂಗದ ಕಡೆಗೆ ಮರಳಿದರು.

وَاِذْ صَرَفْنَآ اِلَيْكَ نَفَرًا مِّنَ الْجِنِّ
يَسْتَمِعُوْنَ الْقُرْاٰنَ ۚ فَلَمَّا حَضَرُوْهُ
قَالُوْٓا اَنْصِتُوْا ۚ فَلَمَّا قُضِيَ وَلَّوْا
اِلٰى قَوْمِهِمْ مُّنْذِرِيْنَ ﴿٢٩﴾

30. ಅವರು ಹೋಗಿ ಹೇಳಿದರು, "ನಮ್ಮ ಜನಾಂಗದವರೇ, ನಾವು ಒಂದು ಗ್ರಂಥವನ್ನು ಆಲಿಸಿದೆವು. ಅದು 'ಮೂಸಾ'ರ ಬಳಿಕ ಅವತೀರ್ಣಗೊಳಿಸಲ್ಪಟ್ಟಿದೆ. ಅದು ತನಗಿಂತ ಮುಂಚೆ ಬಂದ ಗ್ರಂಥಗಳನ್ನು ಸಮರ್ಥಿಸುತ್ತದೆ ಮತ್ತು ಸತ್ಯ ಹಾಗೂ ಸನ್ಮಾರ್ಗ ದೆಡೆಗೆ ಮಾರ್ಗದರ್ಶನ ಮಾಡುತ್ತದೆ.[11]

قَالُوْا يٰقَوْمَنَآ اِنَّا سَمِعْنَا كِتٰبًا اُنْزِلَ
مِنْۢ بَعْدِ مُوْسٰى مُصَدِّقًا لِّمَا بَيْنَ
يَدَيْهِ يَهْدِيْٓ اِلَى الْحَقِّ وَ اِلٰى
طَرِيْقٍ مُّسْتَقِيْمٍ ﴿٣٠﴾

31. ನಮ್ಮ ಜನಾಂಗದವರೇ, ಅಲ್ಲಾಹನತ್ತ ಕರೆಯುವವನ ಕರೆಯನ್ನು ಸ್ವೀಕರಿಸಿಕೊಳ್ಳಿರಿ ಮತ್ತು ಅದರ ಮೇಲೆ ವಿಶ್ವಾಸವಿಡಿರಿ. ಅಲ್ಲಾಹನು ನಿಮ್ಮ ಪಾಪಗಳನ್ನು ಕ್ಷಮಿಸುವನು ಮತ್ತು ದುಃಖದಾಯಕ ಯಾತನೆಯಿಂದ ನಿಮ್ಮನ್ನು ರಕ್ಷಿಸುವನು".

يٰقَوْمَنَآ اَجِيْبُوْا دَاعِيَ اللّٰهِ وَ اٰمِنُوْا
بِهٖ يَغْفِرْ لَكُمْ مِّنْ ذُنُوْبِكُمْ وَ
يُجِرْكُمْ مِّنْ عَذَابٍ اَلِيْمٍ ﴿٣١﴾

ಅಲ್ಲಾಹನು ಪ್ರವಾದಿಗಳ ಮೂಲಕ ತನ್ನ ಸೂಕ್ತಗಳನ್ನು ಕಳುಹಿಸಿ ಅವರನ್ನು ಸುಧಾರಿಸಲು ಪ್ರಯತ್ನಿಸಿದನು. ಆದರೆ ಅವರು ಆ ಮಿಥ್ಯ ದೇವರುಗಳ ದಾಸ್ಯಕ್ಕೆ ಕಟ್ಟು ಬಿದ್ದಿದ್ದರು. ನಾವು ಅಲ್ಲಾಹನ ಹೊರತು ಈ ಮಿಥ್ಯ ದೇವರುಗಳನ್ನೇ ನೆಚ್ಚಿಕೊಳ್ಳುತ್ತೇವೆಂದು ಅವರು ಪಟ್ಟು ಹಿಡಿದರು. ಈಗ ಈ ಬಹುದೇವಾರಾಧಕರ ಮೇಲೆ ಅವರ ಪಥಭ್ರಷ್ಟತೆಯಿಂದಾಗಿ ಅಲ್ಲಾಹನ ಯಾತನೆ ಎರಗುತ್ತಿರುವಾಗ ಮೊರೆಯನ್ನು ಕೇಳುವವರೂ ಸಂಕಟಹರರೂ ಆದ ಆ ಆರಾಧ್ಯರು ಎಲ್ಲಿ ಹೋದರು? ಈ ಕಷ್ಟಕಾಲದಲ್ಲಿ ಅವರೇಕೆ ಇವರ ಕೈ ಹಿಡಿಯಲು ಧಾವಿಸಿ ಬರಲಿಲ್ಲ?

10. ಇದು ಪ್ರವಾದಿವರ್ಯರು(ಸ) ತಾಯಿಫ್ ಯಾತ್ರೆಯಿಂದ ಮಕ್ಕಾಕ್ಕೆ ಮರಳುತ್ತಿರುವಾಗ ದಾರಿಯ ಮಧ್ಯೆ ಸಂಭವಿಸಿದ ಘಟನೆಯ ಪ್ರಸ್ತಾಪ. ಅವರು ನಮಾಝ್‌ನಲ್ಲಿ ಕುರ್‌ಆನ್ ಪಠಿಸುತ್ತಿದ್ದಾಗ ಜಿನ್ನ್(ಯಕ್ಷ)ಗಳ ಒಂದು ಗುಂಪು ಆ ಮಾರ್ಗವಾಗಿ ಸಾಗುತ್ತಿತ್ತು. ಅವರ ಪಠಣವನ್ನು ಕೇಳಿ ಅವು ನಿಂತು ಬಿಟ್ಟವು. ಈ ನಿಟ್ಟಿನಲ್ಲಿ ಬಂದಿರುವ ಎಲ್ಲಾ ವರದಿಗಳಲ್ಲಿ ಒಂದು ವಿಷಯದ ಬಗ್ಗೆ ಒಮ್ಮತಾಭಿಪ್ರಾಯವಿದೆ. ಅದೇನೆಂದರೆ, ಆ ಸಂದರ್ಭದಲ್ಲಿ ಜಿನ್ನ್‌ಗಳು ಪ್ರವಾದಿವರ್ಯರ(ಸ) ಮುಂದೆ ಬಂದಿರಲಿಲ್ಲ. ಹಾಗೆಯೇ ಜಿನ್ನ್‌ಗಳ ಆಗಮನ ಅವರ ಗಮನಕ್ಕೆ ಬಂದಿರಲೂ ಇಲ್ಲ. ತದನಂತರ ಅಲ್ಲಾಹನು ದಿವ್ಯವಾಣಿಯ ಮೂಲಕ ಅವರು ಬಂದು ಕುರ್‌ಆನ್ ಕೇಳಿದುದರ ಬಗ್ಗೆ ಸುದ್ದಿ ತಿಳಿಸಿದನು.

11. ಈ ಜಿನ್ನ್‌ಗಳು ಹಿಂದೆಯೇ ಹ. ಮೂಸಾ(ಅ) ಮತ್ತು ದಿವ್ಯಗ್ರಂಥಗಳ ಮೇಲೆ ವಿಶ್ವಾಸವಿಟ್ಟಿದ್ದವು ಎಂದು ಇದರಿಂದ ವ್ಯಕ್ತವಾಗುತ್ತದೆ. ಕುರ್‌ಆನನ್ನು ಕೇಳಿದ ನಂತರ ಅವರಿಗೆ ಇದು ಹಿಂದಿನ ಪ್ರವಾದಿಗಳು ನೀಡಿದಂತಹ ಬೋಧನೆಯೇ ಆಗಿದೆ ಎಂದು ಮನವರಿಕೆಯಾಯಿತು. ಆದ್ದರಿಂದ ಅವರು ಈ ಗ್ರಂಥ ಮತ್ತು ಅದನ್ನು ತಂದ ಪ್ರವಾದಿವರ್ಯರ(ಸ) ಮೇಲೆಯೂ ವಿಶ್ವಾಸವಿರಿಸಿದರು.

32. ಅಲ್ಲಾಹನ ಕಡೆಗೆ ಕರೆ ನೀಡುವವನ ಮಾತನ್ನು ಸ್ವೀಕರಿಸದಿದ್ದವನು ಭೂಮಿಯಲ್ಲಿ ಅಲ್ಲಾಹನನ್ನು ಸೋಲಿಸಲು ಶಕ್ತನಲ್ಲ ಮತ್ತು ಅಲ್ಲಾಹನಿಂದ ಅವನನ್ನು ರಕ್ಷಿಸತಕ್ಕಂತಹ ರಕ್ಷಕ ಮಿತ್ರರೂ ಅವನಿಗೆ ಇಲ್ಲ. ಇಂತಹವರು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಬಿದ್ದಿರುವರು.

وَمَنْ لَّا يُجِبْ دَاعِيَ اللّٰهِ فَلَيْسَ
بِمُعْجِزٍ فِي الْاَرْضِ وَلَيْسَ لَهٗ مِنْ
دُوْنِهٖۤ اَوْلِيَآءُ ؕ اُولٰٓئِكَ فِيْ ضَلٰلٍ مُّبِيْنٍ ﴿۳۲﴾

33. ಈ ಭೂಮಿ-ಆಕಾಶಗಳನ್ನು ಸೃಷ್ಟಿಸಿದ ಹಾಗೂ ಇವುಗಳನ್ನು ಉಂಟು ಮಾಡುವುದರಲ್ಲಿ ದಣಿಯದ ಅಲ್ಲಾಹನು ಮೃತರನ್ನು ಪುನಃ ಜೀವಂತಗೊಳಿಸಲು ಖಂಡಿತ ಶಕ್ತನೆಂಬುದು ಇವರಿಗೆ ತೋಚುವುದಿಲ್ಲವೇ? ಏಕಿಲ್ಲ! ನಿಶ್ಚಯವಾಗಿಯೂ ಅವನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು.

اَوَلَمْ يَرَوْا اَنَّ اللّٰهَ الَّذِيْ خَلَقَ
السَّمٰوٰتِ وَالْاَرْضَ وَلَمْ يَعْيَ
بِخَلْقِهِنَّ بِقٰدِرٍ عَلٰٓى اَنْ يُّحْيِيَ الْمَوْتٰى ؕ
بَلٰٓى اِنَّهٗ عَلٰى كُلِّ شَيْءٍ قَدِيْرٌ ﴿۳۳﴾

34. ಈ ಸತ್ಯನಿಷೇಧಿಗಳು ಅಗ್ನಿಯ ಮುಂದೆ ತರಲ್ಪಡುವಾಗ ಇವರೊಡನೆ, "ಇದು ಸತ್ಯವಲ್ಲವೇ?" ಎಂದು ಕೇಳಲಾಗುವುದು. ಆಗ ಇವರು, "ಹೌದು! ನಮ್ಮ ಪ್ರಭುವಿನಾಣೆ (ಇದು ನಿಜಕ್ಕೂ ಸತ್ಯ)" ಎನ್ನುವರು. ಆಗ ಅಲ್ಲಾಹನು- "ಹಾಗಿದ್ದರೆ ನೀವು ಮಾಡುತ್ತಿದ್ದ ನಿರಾಕರಣೆಯ ಫಲವಾಗಿ ಈಗ ಯಾತನೆಯ ಸವಿಯನ್ನು ಅನುಭವಿಸಿರಿ" ಎನ್ನುವನು.

وَيَوْمَ يُعْرَضُ الَّذِيْنَ كَفَرُوْا عَلَى
النَّارِ ؕ اَلَيْسَ هٰذَا بِالْحَقِّ ؕ قَالُوْا بَلٰى
وَرَبِّنَا ؕ قَالَ فَذُوْقُوا الْعَذَابَ بِمَا
كُنْتُمْ تَكْفُرُوْنَ ﴿۳۴﴾

35. ಆದುದರಿಂದ ಸಂದೇಶವಾಹಕರೇ, ದೃಢಚಿತ್ತರಾಗಿದ್ದ ಸಂದೇಶವಾಹಕರು ತಾಳ್ಮೆ ವಹಿಸಿದಂತೆ ತಾಳ್ಮೆ ವಹಿಸಿರಿ ಮತ್ತು ಇವರ ವಿಷಯದಲ್ಲಿ ಅವಸರ ಪಡಬೇಡಿರಿ. ಇವರಿಗೆ ಎಚ್ಚರಿಕೆ ನೀಡಲಾಗುತ್ತಿರುವ ವಸ್ತುವನ್ನು ಇವರು ಕಣ್ಣಾರೆ ಕಾಣುವಂದು ತಾವು ಭೂಲೋಕದಲ್ಲಿ ದಿನದ ಒಂದು ಘಳಿಗೆಗಿಂತ ಹೆಚ್ಚು ಕಾಲ ಇರಲಿಲ್ಲವೋ ಎಂಬಂತೆ ಇವರಿಗೆ ಭಾಸವಾಗುವುದು. ವಿಷಯವು ಮುಟ್ಟಿಸಲ್ಪಟ್ಟಿತು, ಇನ್ನು ಆಜ್ಞೋಲ್ಲಂಘಕರಲ್ಲದೆ ಇನ್ನಾರಾದರೂ ನಾಶ ಹೊಂದುವರೇ?

فَاصْبِرْ كَمَا صَبَرَ اُولُوا الْعَزْمِ مِنَ
الرُّسُلِ وَلَا تَسْتَعْجِلْ لَّهُمْ ؕ كَاَنَّهُمْ
يَوْمَ يَرَوْنَ مَا يُوْعَدُوْنَ ۙ لَمْ يَلْبَثُوْٓا
اِلَّا سَاعَةً مِّنْ نَّهَارٍ ؕ بَلٰغٌ ۚ فَهَلْ
يُهْلَكُ اِلَّا الْقَوْمُ الْفٰسِقُوْنَ ﴿۳۵﴾